O.S. No.294/2016 P.W. 1 Dated :12-06-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ. ಎಂ.ಎಸ್. ವಕೀಲರಿಂದಃ-

ನಾವು ಕುಟುಂಬದಲ್ಲಿ ಹಿಸ್ಸೆಯಾಗಿರುವ ಬಗ್ಗೆ ಹಿಸ್ಸಾಪತ್ರ ವನ್ನು ಹಾಜರುಪಡಿಸಿರುವುದಿಲ್ಲ . ಹಿಸ್ಸಾ ಪತ್ರ ನಮ್ಮ ಬಳಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ , ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವಾ ಸ್ವತ್ತು ಪೌತಿ ಆಧಾರದ ಮೇಲೆ ನನ್ನ ತಂದೆಯಿಂದ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. 1987 ರಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದಿದ 1 ವರ್ಷಗಳ ನಂತರ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ಇವತ್ತಿಗೂ ದಾವಾ ಸ್ವತ್ತಿನ ಸ್ವಾಧೀನ ಶಿವಮೂರ್ತಿಯವರ ಕುಟುಂಬದವರ ಸ್ವಾಧೀನದಲ್ಲಿಯೇ ಇರುತ್ತದೆ ಎಂದರೆ ಸಾಕ್ಷಿಯು 2016 ರಿಂದ ಅವರು ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಖಾತೆಯು 1989-90 ರಿಂದ 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿದೆ . 2015 ರಲ್ಲಿ ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿರುವುದು ನನಗೆ ತಿಳಿದಿರುತ್ತದೆ. 1989-90 ಕ್ಕೂ ಮೊದಲು 1 ನೇ ಪ್ರತಿವಾದಿಯ ಗಂಡ ಶಿವಮೂರ್ತಿಯವರೇ ಸ್ವಾಧೀನಾನುಭವದಲ್ಲಿದ್ದ ಕಾರಣ ಅದರ ಆಧಾರದ ಮೇಲೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. 1989-90 ಕ್ಕೂ ಮೊದಲು 1 ನೇ ಪ್ರತಿವಾದಿಯ ಗಂಡ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುವುದು ನಿಮ್ಮ ತಂದೆ ತಾಯಿಯವರಿಗೆ ತಿಳಿದಿತ್ತು ಎಂದರೆ ಸಾಕ್ಷಿಯು ನನಗೆ ತಂದೆಯವರಿಗೆ ತಿಳಿದಿತ್ತೊ ಇಲ್ಲವೋ ಗೊತ್ತಿಲ್ಲ, ನನ್ನ ತಾಯಿಯವರಿಗೆ ತಿಳಿದಿತ್ತು ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿಹಿಸ್ಸಾಯಾದಾಗ ದಾವಾ ಸ್ವತ್ತನ್ನು ಸೇರಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತಾಗಿರುವ ಕಾರಣ ನಮ್ಮ ಚಿಕ್ಕಪ್ಪನವರನ್ನು ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹಿಸ್ಸಾ ಪತ್ರದ ಮುಖಾಂತರ ದಾವಾ ಸ್ವತ್ತು ನನಗೆ ಸೇರಿದ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಮಗೂ , ದಾವಾ ಸ್ವತ್ತಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸುಮಾರು 35 ವರ್ಷಗಳಿಂದ 1 ನೇ ಪ್ರತಿವಾದಿಯ ಗಂಡನೇ ಸ್ವಾಧೀನದಲ್ಲಿದ್ದ ಕಾರಣ ಅವರ ಹೆಸರಿನಲ್ಲಿ ಖಾತೆ ಇದೆ, ಎಂದರೆ ಸಾಕ್ಷಿಯು ನಾವೇ

ಸ್ವಾಧೀನಾನುಭವದಲ್ಲಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಭೌತಿಕವಾಗಿ ಗುರುತಿಸಲು ನನಗೆ ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರಿಗೆ ಶಿವಮೂರ್ತಿಯವರು ಸ್ವಾಧೀನಾನುಭವದಲಿರುವ ಬಗ್ಗೆ ತಿಳಿದಿದ್ದ ಕಾರಣ ಅವರ ಜೀವಿತಾವಧಿಯಲ್ಲಿ ಶಿವಮೂರ್ತಿಯವರಿಗೆ ಯಾವುದೇ ರೀತಿ ಅಡ್ಡಿ , ಆತಂಕಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ , ನನಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 2016 ನೇ ಸಾಲಿನಲ್ಲಿ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನ ಪಡೆದುಕೊಂಡಿರುತ್ತಾರೆಂದು ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2016 ನೇ ಸಾಲಿನ ಪಹಣಿಯನ್ನು ಹೊರತುಪಡಿಸಿ ನಾನು ಬೇರೆ ಪಹಣಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.